**ದಿನಾಂಕ: 03-02-2026ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣೀಕರಿಸಲಾಯಿತು.**

**ಪಾಟೀ ಸವಾಲು: ಎದುರುದಾರರ ಪರ ಶ್ರೀ ಜೆ.ಬಿ.ಹೆಚ್. ವಕೀಲರಿಂದ**

1. ಅಪಘಾತವಾದಾಗ ನಾನು ಮನೆಯಲ್ಲಿ ಇದ್ದೆನು. ಅಪಘಾತ ಯಾವ ರೀತಿ ಆಯಿತು ಎಂದು ಕಣ್ಣಾರೆ ನಾನು ನೋಡಿಲ್ಲ. ನನಗೆ ಮೂರು ಜನ ಮಕ್ಕಳು ಇರುತ್ತಾರೆ. ಮೃತ ತನುಜ್ ನನ್ನ ಮಗನಾಗಬೇಕು. ಮೃತ ತನುಜ್ 7ನೇ ತರಗತಿವರೆಗೆ ವಿದ್ಯಭ್ಯಾಸ ಮಾಡಿರುತ್ತಾನೆ. ಅಪಘಾತವಾದ ಸಮಯದಲ್ಲಿ ತನುಜ್ ನ ವಯಸ್ಸು 19 ವರ್ಷ ವಯಸ್ಸು ಇತ್ತು. ಅಪಘಾತವಾದ ಸಮಯದಲ್ಲಿ ತನುಜನ ವಯಸ್ಸು 19 ವರ್ಷ ವಯಸ್ಸು ಇತ್ತು ಎಂದು ತೋರಿಸಲು ಶಾಲಾ ದಾಖಲಾತಿ ಹಾಜರುಪಡಿಸಿದ್ದೀರಾ ಎಂದರೆ ಆಧಾರ್ ಕಾರ್ಡ್ ಹಾಜರುಪಡಿಸಿದ್ದೇನೆ ಎಂದು ಉತ್ತರಿಸುತ್ತಾರೆ. ಅಪಘಾತವಾದ ಸಮಯದಲ್ಲಿ ಮೃತ ತನುಜನ ವಯಸ್ಸು 25 ರಿಂದ 35 ವರ್ಷ ವಯಸ್ಸು ಇತ್ತು ಎಂದರೆ 19 ವರ್ಷ ವಯಸ್ಸು ಇತ್ತು ಎಂದು ಉತ್ತರಿಸುತ್ತಾರೆ. ನನ್ನ ದೊಡ್ಡ ಮಗ ಕ್ರೂಸರ್ ಚಲಾಯಿಸುತ್ತಾನೆ. ನನ್ನ ದೊಡ್ಡ ಮಗನಿಗೆ ತಿಂಗಳಿಗೆ 9 ಸಾವಿರ ಕೊಡುತ್ತಾರೆ.

2. ಅಪಘಾತವಾದ ಸಮಯದಲ್ಲಿ ಮೃತ ತನುಜನು ಶಾಲೆ ಕಲಿಯುತ್ತಾ ಇದ್ದನು. ನಿಮ್ಮ ಮಗ ತನುಜನು ಯಾವ ಆಸ್ಪತ್ರೆಯಲ್ಲಿ ಕೆಲಸ ಮಾಡುತ್ತಿದ್ದನು ಮತ್ತು ಎಷ್ಟು ಸಂಬಳ ಕೊಡುತ್ತಿದ್ದರು ಮತ್ತು ಅದರ ಮಾಲೀಕ ಯಾರು ಎಂದು ಗೊತ್ತಿಲ್ಲ.

3. ಅಪಘಾತವಾದ ಸಮಯದಲ್ಲಿ ಮೃತ ತನುಜ್, ಅಭಿಶೇಕ್, ಯಶಪಾಲ್ ರೆಡ್ಡಿ ಮೂರು ಜನ ಮೋಟಾರಸೈಕಲ್ ಮೇಲೆ ಹೋಗುತ್ತಿದ್ದರು ಎಂದರೆ ಸರಿ. ಸದರಿ ಮೋಟಾರಸೈಕಲನ್ನು ಅಭಿಶೇಕನು ನಡೆಸುತ್ತಿದ್ದನು ಎಂದರೆ ಸರಿ. ನಿಮ್ಮ ಪ್ರಕಾರ ಮೋಟರಸೈಕಲ್ ಮೇಲೆ ಎಷ್ಟು ಜನ ಹೋಗಬಹುದು ಎಂದರೆ 3 ಜನ ಹೋಗಬಹುದು

ಎಂದು ಉತ್ತರಿಸುತ್ತಾರೆ. ಮೋಟಾರಸೈಕಲ್ ಮೇಲೆ ಇಬ್ಬರು ಮಾತ್ರ ಹೋಗಬೇಕಾಗುತ್ತದೆ ಆದರೆ ಸದರಿ ಮೋಟಾರಸೈಕಲ್ ಮೇಲೆ 3 ಜನ ಹೋಗಿ ತಾವೇ ಆಯತಪ್ಪಿ ಬಿದ್ದು ಗಾಯ ಆಗಲು ಅವರೇ ಕಾರಣ ಮತ್ತು ಮೃತಪಡಲು ಅವರೇ ಕಾರಣ ಎಂದರೆ ಬಸ್ಸಿನವನು ಬಂದು ಹಾಯಿಸಿರುತ್ತಾನೆ ಎಂದು ಉತ್ತರಿಸುತ್ತಾರೆ. ಅಪಘಾತವಾದ ಸಮಯದಲ್ಲಿ ನನ್ನ ಮಗ ತನುಜ್ ಹೆಲ್ಮೇಟ್ ಧರಿಸಿದ್ದನು. ಅಪಘಾತವಾದ ದಿನ ನಿಮ್ಮ ಮಗ ತನುಜ್ ಹೆಲ್ಮೇಟ್ ಧರಿಸಿದ್ದನು ಎಂದು ಸುಳ್ಳು ಹೇಳುತ್ತಿದ್ದೀರಿ ಎಂದರೆ ಸರಿಯಲ್ಲ. ಸದರಿ ಮೋಟಾರಸೈಕಲ್ ಯಾರದು ಇತ್ತು ಎಂದರೆ ಅಭಿಶೇಕನಿಗೆ ಸಂಬಂಧಪಟ್ಟಿದ್ದು ಇರುತ್ತದೆ. ಅಪಘಾತವಾದ ಸಮಯದಲ್ಲಿ ಅಭಿಶೇಕನಿಗೆ ಮೋಟಾರಸೈಕಲ್ ಚಲಾಯಿಸಲು ಯಾವುದೇ ಚಾಲನಾ ಪರವಾನಿಗೆ ಇರಲಿಲ್ಲ ಮತ್ತು ಇನ್ಸುರೆನ್ಸ್ ಇರಲಿಲ್ಲದಿದ್ದರೂ ಸಹ ಪೊಲೀಸರ ಜೊತೆಯಲ್ಲಿ ಶಾಮೀಲಾಗಿ ಬಸ್ ಚಾಲಕನ ಮೇಲೆ ಸುಳ್ಳು ಕೇಸನ್ನು ಮಾಡಿದ್ದೀರಿ ಎಂದರೆ ಸರಿಯಲ್ಲ.

4. ಮೃತ ತನುಜನಿಗೆ ಮದುವೆ ಆಗಿರಲಿಲ್ಲ. KSRTC ಬಸ್ ಚಾಲಕನ ಯಾವುದೇ ತಪ್ಪಿನಿಂದ ಅಪಘಾತ ಆಗಿಲ್ಲದೇ ಇಲ್ಲದಿದ್ದರೂ ಸಹ ಪೊಲೀಸರೊಂದಿಗೆ ಶಾಮೀಲಾಗಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೀರಿ ಎಂದರೆ ಸರಿಯಲ್ಲ. ಅಭಿಶೇಕ್ ಮತ್ತು ಯಶಪಾಲ್ ಕಲ್ಬುರ್ಗಿಯ ನ್ಯಾಯಾಲಯದಲ್ಲಿ ಪರಿಹಾರ ಕೋರಿ ಅರ್ಜಿ ಹಾಕಿದ್ದಾರೆ ಎಂದರೆ ಸರಿ.

**(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)**

ಓ ಹೇ.ಕೇ. ಸರಿ ಅದೆ

ಹಿರಿಯ ಸಿವಿಲ್ ಮತ್ತು ಜೆ ಎಮ್ ಎಫ್ ಸಿ ನ್ಯಾಯಾಧೀಶರು,
ಜೇವರ್ಗಿ